ಶ್ರೀ ಬಿ. ವಿ. ಕಕ್ಕಿಲಾಯ.—ಬಂಟ್ವಾಳ ಹಾಗೂ ಪಾಣೆ ಪಂಚಾಯತಿಗಳನ್ನು ಸೇರಿಸಿ ಇಲ್ಲಿನ ತಾಲೂಕು ಹೆಡ್‌ಕ್ವಾರ್ಟರಿನಲ್ಲಿ ಮುನಿಸಿಪಾಲಟಿಗಳನ್ನು ಮಾಡುವುದು ಸೂಕ್ತ ಎಂದು ಸರ್ಕಾರಕ್ಕೆ ಮನವಿ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ? ಇದರ ಬಗ್ಗೆ ಸರಕಾರದ ಅಭಿಪ್ರಾಯವೇನು?

† ಶ್ರೀ ಬಿ. ಬಸವಲಿಂಗಪ್ಪ.—ಸೂಕ್ತ ಎಂದು ತಿಳಿದುಕೊಂಡು ಇಲ್ಲಿಂದ ಬಂದ ರಿಪೋರ್ಟನ್ನು ಡಿವಿಜನಲ್ ಕಮಿಷನರ್‌ರವರ ಕಡೆಗೆ ಕಳುಹಿಸಲಾಗಿದೆ, ಅವರಿಂದ ವರದಿ ಬಂದ ನಂತರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮೂರು ಪಂಚಾಯತಿಗಳೂ ಮುನಿಸಿಪಾಲಟಿ ಮಾಡಬೇಕೆಂದು ನಿರ್ಣಯ ಮಾಡಿ ಸರಕಾರಕ್ಕೆ ಕಳುಹಿಸಿರಲಿಲ್ಲವೇ? ಇದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ.—ನಿರ್ಣಯ ಮಾಡಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆ. ಇದನ್ನು ಈಗ ಡಿವಿಜನರ್ ಕಮಿಷನರ ಕಡೆಗೆ ಕಳುಹಿಸಲಾಗಿದೆ, ಇದರಂತೆ ಎಲ್ಲಾ ಟೌನುಗಳಲ್ಲೂ ಮುನಿಸಿಪಾಲಟಿಗಳನ್ನು ಮಾಡಬೇಕೆಂಬುದು ಸರಕಾರದ ಅಭಿಪ್ರಾಯ. ಇದರ ಬಗ್ಗೆ ತೀರ್ಮಾನವನ್ನು ಅವರ ವರದಿ ಬಂದ ಮೇಲೆ ತೆಗೆದುಕೊಳ್ಳಬೇಕಾಗಿದೆ.

Unitwise Seniority of Forest Department

693. Sri B. SATHYANARAYANA SINGH (Hospet).—

Will the Minister for Agriculure and Forests be pleased to state :—

(*a*) whether the Government has directed the Chief Conservator of Forests to implement unitwise Seniority;

(*b*) if so, whether it has come to the notice of the Government that the above principle has not been implemented in Forest Department ?

(*c*) the reasons for the same ?

Sri K. H. PATIL (Minister for Agriculture and Forests).—

(*a*) Yes.

(*b*) Yes.

(*c*) This could not be given effect to immediately as it leads to administrative dislocation. The matter is being reviewed.

ಶ್ರೀ ಬಿ. ಸತ್ಯನಾರಾಯಣಸಿಂಗ್.—(೩) ಗೆ ಉತ್ತರವಾಗಿ ಇದನ್ನು ಪುನರ್ ಪರಿಶೀಲನೆ ಆಗುತ್ತಿದೆ ಎಂದರೆ ಇದಕ್ಕೆ ಇದ್ದ ಕಾರಣಗಳಾದರೂ ಏನು? ಅದನ್ನು ಸರಕಾರ ತಿಳಿಸುತ್ತದೆಯೇ?

† ಶ್ರೀ ಕೆ. ಹೆಚ್. ಪಾಟೀಲ್.—ಬೇರೆ ಬೇರೆ ಭಾಗಗಳಿಂದ ಜನ ಬಂದು ಮೈಸೂರು ರಾಜ್ಯಕ್ಕೆ ಸೇರಿರುವುದರಿಂದ ಇವರೆಲ್ಲರ ಸೀನಿಯಾರಿಟಿ ಲಿಸ್ಟು ಮಾಡುವಾಗ ಬಹಳ ಜನರು ಇದರಲ್ಲಿ ಅನ್ಯಾಯಗಳಾಗಿವೆ ಎಂದು ಅಭಿಪ್ರಾಯ ಪಟ್ಟರು ಮತ್ತು ಇದೇ ವಿಷಯವಾಗಿ ಕೋರ್ಟಿಗೂ ಹೋದರು. ಆನಂತರ ಸರಕಾರ ಮಾಡಿದ ಸೀನಿಯಾರಿಟಿ ಪಟ್ಟಿಯನ್ನು ಚಾಲೆಂಜು ಮಾಡಿದರು, ಇದರ ಸಲುವಾಗಿ ಹೈಕೋರ್ಟಿನಲ್ಲಿ ಒಂದು ನಿರ್ಣಯವಾಯಿತು. ಇದು ಸರಿಯಾಗಿಲ್ಲ ಎಂದು ಸುಪ್ರೀಂ ಕೋರ್ಟುವರಗೆ ಹೋಗಿರುವ ಪ್ರಕರಣಗಳೂ ಇದರಲ್ಲಿವೆ, ಸುಪ್ರೀಂ ಕೋರ್ಟಿನಲ್ಲಿ ನಿರ್ಣಯ ಆಗುವ ತನಕ ಐದು ವಿಭಾಗಗಳ ಎಂದರೆ ಬೊಂಬಾಯಿ ಭಾಗದವರ ಲಿಸ್ಟು ಇನ್ನೊಂದು

(ಶ್ರೀ ಕೆ. ಎಚ್. ಪಾಟೀಲ್)

ಭಾಗದವರ ಲಿಸ್ಟು ಹಾಗೂ ಮೈಸೂರು ರಾಜ್ಯದವರ ಲಿಸ್ಟು ಎಂದು ಬೇರೆ ಬೇರೆ ಮಾಡಿ ಪುನಃ ಕೋರ್ಟಿಗೆ ಕಳುಹಿಸಿಕೊಡಲಾಗಿದೆ. ಕೋರ್ಟಿನವರ ಅಭಿಪ್ರಾಯ ಸರಕಾರಕ್ಕೆ ಬಂದ ನಂತರ ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಂಡು ಮಾಡುತ್ತೇವೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಇದರಲ್ಲಿ ಪ್ರಮೋಷನ್ ಕೊಡುವಾಗ ಜಾತೀಯ ಆಧಾರದ ಮೇಲೆ ತಾರತಮ್ಯವಾಗಿ ಕೆಲವು ಅಧಿಕಾರಿಗಳಿಗೆ ಪ್ರಮೋಷನ್ ಆಗಿದೆ ಎಂದು ಹೇಳುತ್ತಾರೆ. ಇದರ ಬಗ್ಗೆ ಸರಕಾರಕ್ಕೇನಾದರೂ ಗೊತ್ತಿದೆಯೆ ?

ಶ್ರೀ ಕೆ. ಹೆಚ್. ಪಾಟೀಲ್.—ಜಾತೀಯ ಆಧಾರವೇ ಇದರಲ್ಲಿ ಬರುವುದಿಲ್ಲ. ನನಗೆ ಯಾವ ಜಾತಿ ಎನ್ನುವುದೂ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ಇರುವ ಅಭಿಪ್ರಾಯ ತಿಳಿಸಿದರೆ ಆಗ ಇದರ ಬಗ್ಗೆ ವಿಚಾರ ಮಾಡಿ ಹೇಳುತ್ತೇನೆ.

Disparity in Pay Scales of Language Pandits and Trained Graduates

730. Smt. C. NAGAMMA KESHAVA MURTHY (Davangere).—

Will the Minister for Education be pleased to state :—

(*a*) whether there is any disparity in the pay scales of language Pandits and trained Graduates (Grade II teachers in High Schools) ;

(*b*) if so, steps taken by the Government to remove this disparity ?

Sri A. R. BADARINARAYANA (Minister for Education).—

(*a*) There is no disparity in the existing pay scales between language teachers (i. e., secondary school language Assistants) and General teachers (i.e., Secondary school assistants) since the following pay scales have been prescribed to them in the 1970 revised pay rules :

1. Language teacher (untrained) Rs. 130-290.
2. General teacher (untrained) Rs. 130-290.
3. Language teacher (trained) Rs. 175-450.
4. General teacher (trained) Rs. 175-450.

(*b*) Does not arise in view of reply to clause (*a*) above.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಇದರಲ್ಲಿ ಜನರಲ್ ಪಂಡಿತರಿಗೂ ಭಾಷಾ ಉಪಾಧ್ಯಾಯರುಗಳಿಗೂ ಎರಡು ಗ್ರೇಡುಗಳಿವೆ ಎಂದರೆ ಸರಕಾರವೇ ಹೇಳಿರುವಂತೆ ಸಾಮಾನ್ಯ ಉಪಾಧ್ಯಾಯರುಗಳಿಗೆ 130—290ರ ಗ್ರೇಡು ಮತ್ತು ಭಾಷಾ ಉಪಾಧ್ಯಾಯರುಗಳಿಗೆ 175—450ರ ಗ್ರೇಡು ಇದೆ. ಇದರಂತೆ ಮಿನಿಮಂನಲ್ಲಿ 45 ರೂಪಾಯಿಗಳ ಹಾಗೂ ಮ್ಯಾಕ್ಸಿಮಂನಲ್ಲಿ 160 ರೂಪಯಿಗಳ ವ್ಯತ್ಯಾಸವಿರುತ್ತದೆ. ಇದರ ಬಗ್ಗೆ ಸರಕಾರದ ಅಭಿಪ್ರಾಯವೇನು ?

† ಶ್ರೀ ಎ. ಆರ್. ಬದರೀನಾರಾಯಣ್.—ಇದರಲ್ಲಿ ಅನ್‌ಜ್ರೈನ್ ಆಗಿರುವವರು ಟ್ರೇನಿಂಗು ಮಾಡಿಕೊಳ್ಳಬೇಕು ಎನ್ನುವುದು ಸರಕಾರದ ಉದ್ದೇಶ, ಇದಕ್ಕೆಗಿ ಟ್ರೇನಿಂಗು ಪಡೆದಿರುವ ಉಪಾಧ್ಯಾಯರುಗಳಿಗೆ ಜಾಸ್ತಿ ಸಂಬಳ ಕೊಡಬೇಕೆಂದು ಮಾಡಲಾಗಿದೆ.